# ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ವಿಶೇಷ ರಾಜ್ಯ ಪತ್ರಿಕೆ

| | | |
|---|---|---|
| ಭಾಗ – ೪ಎ<br>Part – IVA | ಬೆಂಗಳೂರು, ಮಂಗಳವಾರ, ೨೩ ಸೆಪ್ಟೆಂಬರ್, ೨೦೨೫ (ಆಶ್ವಯುಜ ೦೧, ಶಕವರ್ಷ ೧೯೪೭)<br>BENGALURU, TUESDAY, 23 SEPTEMBER, 2025 (AASHWAYUJA 01, SHAKAVARSHA 1947) | ನಂ. ೬೨೫<br>No. 625 |


## GOVERNMENT OF KARNATAKA

No. FD 7 PES 2025

Karnataka Government Secretariat
Vidhanasoudha,
Bengaluru, dated:23rd September 2025

## NOTIFICATION-I

The draft of the following rules further to amend the Karnataka Excise(General Conditions of Licences) Rules, 1967, which the Government of Karnataka proposes to make in exercise of the powers conferred by Section 71 of the Karnataka Excise Act, 1965 (Karnataka Act 21 of 1966) is hereby published as required under sub-section (1) of section 71 of the said act for the information of all the persons likely to be affected thereby and notice is hereby given that the said draft will be taken into consideration after the expiry of Ten days from the date of its publication in the official Gazette.

Any objection or suggestion which may be received by the State Government from any person in respect to the said draft before the expiry of period specified above will be considered by the State Government. The objections or suggestions may be addressed to the Principal Secretary to Government, Finance Department, Vidhana Soudha, Dr, B.R. Ambedkar Veedhi, Bengaluru-01.

## DRAFT RULES

**1. Title and commencement: -**(1) These rules may be called the Karnataka Excise (General Conditions of Licences) (Second Amendment) Rules, 2025.

(2) They shall come into force from the date of their final publication in the official Gazette.

**2. Amendment of rule 5:-**In the Karnataka Excise (General Conditions of Licences) Rules, 1967(hereinafter referred to as the 'said rules'), in rule 5, in sub-rule (4),in the proviso, for the word, letters and figure "or Form CL-9", the words, letters and figures "or Form CL-9 or Form CL-9A" shall be substituted.

3. **<u>Amendment of rule 17-A:</u>-** For rule 17-A of the said rules, the following shall be substituted,namely:-

"**17-A. Transfer in the event of death –** In the event of death of the licensee or the lessee during the validity(currency) of the licence or lease or within a period of six months from the date of death of the licensee or the lessee, the Deputy Commissioner may on an application by the legal heirs of the deceased with the previous sanction of the Excise Commissioner, transfer the licence or the lease as the case may be, in their favour:

**Provided that**, the legal heir of the deceased licensee or the guardian of the legal heir shall inform the Deputy Commissioner of Excise about the death of the licensee within forty five days from the date of death, failing which, the authority granting the licence shall impose a fine equivalent to ten percent of the licence fee.

**Provided** further that, no such fine shall be levied unless an opportunity of being heard is given to the legal heir of the deceased licensee or the guardian of the legal heir".

4. **<u>Amendment of rule 17-B:</u>-** In rule 17-B of the said rules, in sub-rule (3), for the words "or impose a fine", the words "or impose a fine equivalent to ten percent of the licence fee" shall be substituted.

5. **<u>Amendment of rule 23:</u>-** In rule 23 of the said rules-

(i) for the words "Deputy Commissioner", wherever it occurs, the words "Deputy Commissioner of Excise" shall be substituted

(ii) in the first proviso, for the words, letters and figures "in case of CL-2 and CL-9 licences", the words, letters and figures "in case of CL-2, CL-2A, CL-9 and CL-9A licences" shall be substituted.

(iii) the fourth proviso shall be omitted.

By Order and in the Name
of the Governor of Karnataka
Sd/-
(Bhimappa P Ajoor)
Under Secretary to Government,
Finance Department (Excise)

## GOVERNMENT OF KARNATAKA

No. FD 7 PES 2025

Karnataka Government Secretariat
Vidhanasoudha,
Bengaluru, dated:23rd September 2025

## NOTIFICATION-II

The draft of the following rules further to amend the Karnataka Excise (Lease of the Right of Retail Vend of Beer) Rules, 1976, which the Government of Karnataka proposes to make in exercise of the powers conferred by Section 71 of the Karnataka Excise Act, 1965 (Karnataka Act 21 of 1966) is hereby published as required under sub-section (1) of section 71 of the said act for the information of all persons likely to be affected thereby and notice is hereby given that the said draft will be taken into consideration after the expiry of Ten days from the date of its publication in the official Gazette.

Any objection or suggestion which may be received by the State Government from any person in respect of the said draft before the period specified above will be considered by the State Government. The objections or suggestions may be addressed to the Principal Secretary to Government, Finance Department, Vidhana Soudha, Dr. B.R. Ambedkar Veedhi, Bengaluru -01.

## DRAFT RULES

**1. Title and commencement: -** (1) These rules may be called the Karnataka Excise (Lease of the Right of Retail Vend of Beer) (Second Amendment) Rules, 2025.

(2) They shall come into force from the date of their final publication in the official Gazette.

**2. Amendment of rule 5:-** In the Karnataka Excise (Lease of the Right of Retail Vend of Beer) Rules, 1976, in rule 5, in sub-rule (1), for the word, letters and figure “or Form CL-9”, the words, letters and figures “or Form CL-9 or Form CL-9A” shall be substituted.

By Order and in the Name
of the Governor of Karnataka

Sd/-
(Bhimappa P Ajoor)
Under Secretary to Government,
Finance Department (Excise)

# GOVERNMENT OF KARNATAKA

No. FD 7 PES 2025

Karnataka Government Secretariat
Vidhanasoudha,
Bengaluru, dated:23rd September 2025

## NOTIFICATION-III

The draft of the following rules further to amend the Karnataka Excise(Sale of Indian & Foreign Liquors) Rules 1968, which the Government of Karnataka proposes to make in exercise of the powers conferred by Section 71 of the Karnataka Excise Act, 1965 (Karnataka Act 21 of 1966) is hereby published as required under sub-section (1) of section 71 of the said act for information of all persons likely to be affected thereby and notice is hereby given that the said draft will be taken into consideration after the expiry of Ten days from the date of its publication in the official Gazette.

Any objection or suggestion which may be received by the State Government from any person in respect of the said draft before the period specified above will be considered by the State Government. The objections or suggestions may be addressed to the Principal Secretary to Government, Finance Department, Vidhana Soudha, Dr. B.R. Ambedkar Veedhi, Bengaluru - 01.

## DRAFT RULES

**1. Title and commencement:-** (1) These rules may be called the Karnataka Excise (Sale of Indian & Foreign Liquors) (Second Amendment) Rules, 2025.

(2) They shall come into force from the date of their final publication in the official Gazette.

**2. Amendment of rule 2:-** In the Karnataka Excise (Sale of Indian and Foreign Liquors) Rules, 1968, (hereinafter referred to as the 'said Rules') in rule 2,-

(i)after clause **(a)**, the following clauses shall be inserted, namely:-

**"(a-1) "Auction pool"** refers to those licences which are lapsed or not renewed as per the provisions of the Act and rules made thereunder that are available and made available for "e-auction**;**

**(a-2) "Bid Amount"** means the total monetary offer made by a bidder in response to invitation to auction, indicating what they are willing to pay for the licence.

**(a-3) "e-auction"** means an online auction service in which eligible participants bid for grant of any Licence provided under these rules and carried out through "**electronic platform**" as per notification issued by the Government from time to time."

(ii)after clause (f), the following clause shall be inserted, namely:-

**"(f-1) "winning bid"** is the highest offer submitted by a qualified bidder during auction, which is accepted by the Excise Department for the grant of a licence in specified area for a definite period."

**3. Amendment of rule 3:-** In rule 3 of the said rules-

(i)after sub-rule (2), the following shall be inserted, namely:-

**"(2-A) Retail off shop licences for vend of Indian liquor or Foreign liquor or both not to be drunk on the premises-**Not withstanding anything contained in rule-12, these licences shall be granted in Form CL-2A for the sale of Indian or Foreign Liquor or both in sealed bottles to successful bidders, where bidding process shall be carried through "e-auction. The discontinued CL-2 licences, CL-2 licences which are yet to be granted as per 1987 quota(vide Government order No. HD 452 EFL 86, dated 30.06.1987), the discontinued CL-11(C) licences, CL-11(C) licences which are yet to be granted as per allotment to the Mysore Sales International Limited( M.S.I.L) as per the Government Order No. FD 7 EFL 2008, dated 03.07.2009 and Government Order No. FD 15 EFL 2015, dated 23.09.2016 respectively, shall be granted in Form CL-2A to successful bidders, where bidding process shall be carried through "e-auction".

**Provided that**, the payment of licence fee and additional licence fee for the purpose of CL-2A shall be as specified by the Government from time to time"

(ii) after sub-rule (9), the following shall be inserted, namely:-

**"(9-A) Refreshment Room (Bar) Licence.-** These licences shall be granted in Form CL-9A for the sale of Indian or Foreign Liquor or both combined with the supply of meals or eatables. The dis-continued CL-9 licenses shall be granted in Form CL-9A to successful bidders, where bidding process shall be carried through "e-auction;

Provided that the provisions contained in sub-rule (9) of rule 3 pertaining to functioning of CL-9 Licence shall *mutatis mutandis* apply to the CL-9A Licence.

**Provided further that**, the payment of licence fee and additional licence fee for the purpose of CL-9A shall be as specified by the Government from time to time"

**4. Amendment of rule 5:-** In rule 5 of the said rules, after the third proviso, the following proviso shall be inserted, namely:-

"Provided also that, the Deputy Commissioner may grant CL-2A, CL-9A Licences to successful bidder in e-auction with the previous approval of the Excise Commissioner, following the reservation norms fixed for this purpose by the government and subject to the conditions specified in e-auction notification issued from time to time".

**5. Amendment of rule 5-A:-** In rule 5-A of the said rules;-

(i)in sub-rule (3), for the existing proviso the following provisos shall be inserted, namely:-

"Provided that, nothing in sub-rule 5-A (3) shall be applicable to CL-2, CL-9 and CL-11(C) Licences.

Provided also that,

(a) the CL-2, CL-9, CL-11(C) licences which have not been renewed as on the date of final publication of the Karnataka Excise( Sale of Indian and Foreign Liquors) (Second Amendment) rules, shall be deemed to have lapsed and forfeited. Such licences shall not be eligible for renewal and no rights shall accrue to the licensee in respect thereof, and these licences shall fall into the auction pool for auctioning;

(b) CL-2, CL-9, CL-11(C), CL-2A and CL-9A licences which are not renewed within a period of six months from the commencement of Excise year, or, within a period of six months from the date of death of the licensee, are considered as lapsed and forfeited. Such licences shall not be eligible for renewal, and no rights shall accrue to the licensee in respect thereof, such licences shall fall into the auction pool for auctioning;

(ii)Sub-rule 4 shall be omitted.

**6. Amendment of rule 12:-** In rule 12 of the said rules, in sub-rule (3) after explanation, the following proviso shall be inserted, namely:-

"Provided that, nothing in rule 12 shall be applicable to CL-2A licences"

**7. Insertion of new Forms CL-2A :-** In the said rules after Form CL-2 and the entries relating thereto the following Form shall be inserted, namely:-

**"Form CL-2A**
**[See rule 3(2-A)]**

**Licence for the retail off vend of Indian Liquor (other than Arrack) or Foreign Liquor, or both.**

Register No………………………………..
Name of Licence Holder…………………
Address of Licence Holder............. and Address of Licence...............
Locality Town……………..
Street……………
Door No………

I,……………..the Deputy Commissioner of the ……………..District (in case of grant of licence)/Deputy Commissioner of Excise…………..District (in case of renewal of licence) in consideration of the payment of the prescribed licence fee of Rs………………..do hereby authorise Sri………..son of Sri………….. residing in …………to sell Indian Liquor (other than arrack) or Foreign Liquor or both at premises No……….situated in…………..subject to the conditions prescribed below:-

**CONDITIONS**

1. The licensee shall be bound by the provisions of the Karnataka Excise Act, 1965(Karnataka Act 21 of 1966) Notifications and any general or special rules prescribed thereunder and the Orders issued by the Excise Commissioner/Deputy Commissioner from time to time.

2. The privilege under this licence extends to the sale of Indian liquor (other than arrack) or Foreign liquors of the brands furnished by the licensee. Any alterations and additions to the lists furnished should be approved by the Deputy Commissioner. No liquors below the strength of 25° under proof in case of Brandy, Whisky and Rum and 35° under proof in case of Gin and not more than 8 per cent of alcohol by volume in case of Beer will ordinarily be included in the list.

3. The holder of this licence shall upon requisition by any Officer not below the grade of a Sub-Inspector of Excise be bound to produce to such officer the original invoice showing the importation of all liquors for the sale of which this licence is granted for inspection and to allow the samples of liquors in the shop to be tested.

4. The licensee is bound to maintain correct daily accounts of transactions and submit the return every month to the Excise Officers concerned, within the first week of the following month.

5. The licence may be suspended or cancelled in accordance with the provisions of Section 29 of the Act and licensee or his employee shall be liable for prosecution for breach of any of the conditions of the licence, under the provisions of the Act or the rules and orders thereunder.

6. The licence shall continue in force till the.................

7. The sale of liquor to the public will be in sealed bottles of capacity of 0.060, 0.090, 0.180, 0.300, 0.375, 0.600, 0.750 litres and one litre in respect of liquors and 0.325 and 0.650 litres in the case of beer. The maximum quantity of liquors and beer to be sold at a time should not exceed:

| | |
|---|---|
| (1) Foreign liquors | 9.1 litres |
| (2) Indian liquors (other than arrack) | 2.3 litres |
| (3) Beer | 18.2 litres |

Provided that the Excise Commissioner may for reasons to be recorded in writing, permit the sale of liquor in any other quantity:

Provided further that, the licensee may sell Indian Liquor/Foreign Liquor/Country Beer/Wine/Fortified Wine to a person holding a licence in Form CL-5 and issue bills accordingly. The maximum quantity prescribed for possession, sale and transport of these intoxicants under rule 21 of the Karnataka Excise (Possession, Transport, Import and Export of Intoxicants) Rules, 1967, shall not be applicable in case of sale to a person holding a licence in Form CL-5.

8. No liquor shall be allowed to be drunk on the premises.

8-A. The licensee shall sell or permit to sell Indian Liquor or Foreign Liquor or both at prices not exceeding the Maximum Retail Price (MRP) indicated on the labels of the bottles as declared under rule 2-AF of the Karnataka Excise (Excise Duties and Fees) Rules, 1968 and issue bills to the customers accordingly.

9. The opening and closing hours shall be from ……… to………..

10. There shall be only one and the same entrance and exit for the shop.

[Office of the Deputy Commissioner... District (in case of grant of licence)/Office of the Deputy Commissioner of Excise....... District (in case of renewal of licence)]

Date: Deputy Commissioner.......... District (in case of grant of licence)/Deputy Commissioner of Excise ..... District (in case of renewal of licence)

**8. <u>Insertion of new Form CL-9A</u>:-** In the said rules, after Form CL-9 and entries relating thereto, the following Form shall be inserted, namely:-

**“Form CL-9A**
**[See rule 3(9-A)]**

**Licence for the sale of Indian Liquor (other than Arrack) or Foreign Liquor or both to be drunk in the premises, combined with meals and refreshments in the Refreshment Rooms (Bars)**

Register No………………………………..
Name of Licence Holder…………………
Address of Licence Holder................ and Address of Licence............
Locality Town……………..
Street……………
Door No………

I,……………..the Deputy Commissioner of the ……………..District (in case of grant of licence)/Deputy Commissioner of Excise…………..District (in case of renewal of licence) in consideration of the payment of the prescribed licence fee of Rs………………..do hereby authorise Sri………..son of Sri………….. residing in ………….to sell Indian Liquor (other than arrack) or Foreign Liquor or both at premises No………situated in…………..subject to the conditions prescribed below:-

**CONDITIONS**

1. The licensee shall be bound by the provisions of the Karnataka Excise Act, 1965(Karnataka Act 21 of 1966), Notifications and any general or special rules prescribed thereunder and the Orders issued by the Excise Commissioner/Deputy Commissioner from time to time.

2. The privilege under this licence extends to the sale of Indian liquor (other than arrack) or Foreign liquors of the brands furnished by the licensee. Any alterations and additions to the lists furnished should be approved by the Deputy Commissioner. No liquors below the strength of 25° under proof in case of Brandy, Whisky and Rum and 35° under proof in case of Gin and not more than 8 per cent of alcohol by volume in case of Beer will ordinarily be included in the list.

3. The holder of this licence shall upon requisition by any Officer not below the grade of a Sub-Inspector of Excise be bound to produce to such officer the original invoice showing the importation of all liquors for the sale of which this licence is granted for inspection and to allow the samples of liquors in the shop to be tested.

4. The licensee is bound to maintain correct daily accounts of transactions and submit the return every month to the Excise Officers concerned, within the first week of the following month.

5. The licence may be suspended or cancelled in accordance with the provisions of Section 29 of the Act and licensee or his employee shall be liable for prosecution for breach of any of the conditions of the licence, under the provisions of the Act or the rules and orders thereunder.

6. The licence shall continue in force till the.................

7. The sale of liquor is restricted to persons supplied with meals or refreshment prepared and served for consumption in the premises only.

8. The opening and closing hours shall be from ……… to………..

[Office of the Deputy Commissioner... District (in case of grant of licence)/Office of the Deputy Commissioner of Excise....... District (in case of renewal of licence)]

Date: Deputy Commissioner............ District (in case of grant of licence)/Deputy Commissioner of Excise ........ District (in case of renewal of licence)"

By Order and in the Name
of the Governor of Karnataka
Sd/-
(Bhimappa P Ajoor)
Under Secretary to Government,
Finance Department (Excise)

**ಕರ್ನಾಟಕ ಸರ್ಕಾರ**

ಸಂಖ್ಯೆ: ಆಇ 7 ಪಿಇಎಸ್ 2025

ಕರ್ನಾಟಕ ಸರ್ಕಾರದ ಸಚಿವಾಲಯ
ವಿಧಾನಸೌಧ
ಬೆಂಗಳೂರು, ದಿನಾಂಕ: 23ನೇ ಸೆಪ್ಟೆಂಬರ್ 2025

**ಅಧಿಸೂಚನೆ–I**

ಕರ್ನಾಟಕ ಅಬಕಾರಿ ಅಧಿನಿಯಮ, 1965 (1966 ರ ಕರ್ನಾಟಕ ಅಧಿನಿಯಮ ಸಂಖ್ಯೆ 21) ರ 71 ನೇ ಪ್ರಕರಣದ ಮೂಲಕ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು ರಚಿಸಲು ಉದ್ದೇಶಿಸಿರುವ, ಕರ್ನಾಟಕ ಅಬಕಾರಿ (ಸನ್ನದುಗಳ ಸಾಮಾನ್ಯ ಷರತ್ತುಗಳು) ನಿಯಮಗಳು, 1967 ಅನ್ನು ಮತ್ತಷ್ಟು ತಿದ್ದುಪಡಿ ಮಾಡಲು, ಈ ಮುಂದಿನ ನಿಯಮಗಳ ಕರಡನ್ನು, ಸದರಿ ಕಾಯ್ದೆಯ ಪ್ರಕರಣ 71ರ (1) ನೇ ಉಪ–ಪ್ರಕರಣದ ಮೂಲಕ ಅಗತ್ಯಪಡಿಸಿರುವಂತೆ ಇದರಿಂದ ಬಾಧಿತರಾಗಬಹುದಾದ ಎಲ್ಲಾ ವ್ಯಕ್ತಿಗಳ ಮಾಹಿತಿಗಾಗಿ ಈ ಮೂಲಕ ಪ್ರಕಟಿಸಿದೆ ಮತ್ತು ಅದು ಸರ್ಕಾರಿ ರಾಜ್ಯಪತ್ರದಲ್ಲಿ ಪ್ರಕಟಣೆಯಾದ ದಿನಾಂಕದಿಂದ ಹತ್ತು ದಿನಗಳ ತರುವಾಯ ಸದರಿ ಕರಡನ್ನು ಪರಿಗಣನೆಗೆ ತೆಗೆದುಕೊಳ್ಳಲಾಗುವುದೆಂದು ಈ ಮೂಲಕ ತಿಳಿವಳಿಕೆ ನೀಡಲಾಗಿದೆ.

ಮೇಲೆ ನಿರ್ದಿಷ್ಟಪಡಿಸಿದ ಅವಧಿಯ ಮುಕ್ತಾಯಕ್ಕೆ ಮುಂಚೆ, ಸದರಿ ಕರಡಿಗೆ ಸಂಬಂಧಿಸಿದಂತೆ ರಾಜ್ಯ ಸರ್ಕಾರವು ಯಾವುದೇ ವ್ಯಕ್ತಿಯಿಂದ ಸ್ವೀಕರಿಸಬಹುದಾದ ಯಾವುದೇ ಆಕ್ಷೇಪಣೆ ಅಥವಾ ಸಲಹೆಗಳನ್ನು ರಾಜ್ಯ ಸರ್ಕಾರವು ಪರಿಗಣಿಸುತ್ತದೆ. ಆಕ್ಷೇಪಣೆ ಅಥವಾ ಸಲಹೆಗಳನ್ನು ಸರ್ಕಾರದ ಪ್ರಧಾನ ಕಾರ್ಯದರ್ಶಿ, ಆರ್ಥಿಕ ಇಲಾಖೆ, ವಿಧಾನ ಸೌಧ, ಡಾ.ಬಿ.ಆರ್. ಅಂಬೇಡ್ಕರ್ ವೀಧಿ,ಬೆಂಗಳೂರು–01 ಇವರಿಗೆ ಕಳುಹಿಸಬಹುದು.

**ಕರಡು ನಿಯಮಗಳು**

**1. ಶೀರ್ಷಿಕೆ ಮತ್ತು ಪ್ರಾರಂಭ** :– (1) ಈ ನಿಯಮಗಳನ್ನು ಕರ್ನಾಟಕ ಅಬಕಾರಿ (ಸನ್ನದುಗಳ ಸಾಮಾನ್ಯ ಷರತ್ತುಗಳು) (ಎರಡನೇ ತಿದ್ದುಪಡಿ) ನಿಯಮಗಳು, 2025 ಎಂದು ಕರೆಯತಕ್ಕದ್ದು.

(2) ಈ ನಿಯಮಗಳು, ಕರ್ನಾಟಕ ರಾಜ್ಯ ಪತ್ರದಲ್ಲಿ ಅವುಗಳನ್ನು ಅಂತಿಮವಾಗಿ ಪ್ರಕಟಿಸಿದ ದಿನಾಂಕದಿಂದ ಜಾರಿಗೆ ಬರತಕ್ಕದ್ದು.

**2. 5 ನೇ ನಿಯಮದ ತಿದ್ದುಪಡಿ**:– ಕರ್ನಾಟಕ ಅಬಕಾರಿ (ಸನ್ನದುಗಳ ಸಾಮಾನ್ಯ ಷರತ್ತುಗಳು) ನಿಯಮಗಳು, 1967 (ಇದರಲ್ಲಿ ಇನ್ನು ಮುಂದೆ ಸದರಿ ನಿಯಮಗಳೆಂದು ಉಲ್ಲೇಖಿಸಲಾಗಿದೆ)ರ, ನಿಯಮ 5 ರಲ್ಲಿ, ಉಪ–ನಿಯಮ (4) ಪರಂತುಕದಲ್ಲಿ, "ಅಥವಾ ನಮೂನೆ ಸಿಎಲ್–9" ಎಂಬ ಪದ, ಅಕ್ಷರಗಳು ಮತ್ತು ಅಂಕಿಯ ಬದಲಾಗಿ, "ಅಥವಾ ನಮೂನೆ ಸಿಎಲ್–9 ಅಥವಾ ನಮೂನೆ ಸಿಎಲ್–9ಎ" ಎಂಬ ಪದಗಳು, ಅಕ್ಷರಗಳು ಮತ್ತು ಅಂಕಿಗಳನ್ನು ಪ್ರತಿಸ್ಥಾಪಿಸತಕ್ಕದ್ದು.

**3. 17–ಎ ನಿಯಮದ ತಿದ್ದುಪಡಿ**:– ಸದರಿ ನಿಯಮಗಳ 17–ಎ ನೇ ನಿಯಮದಲ್ಲಿರುವುದರ ಬದಲಾಗಿ, ಈ ಮುಂದಿನದನ್ನು ಪ್ರತಿಸ್ಥಾಪಿಸತಕ್ಕದ್ದು.

**"17–ಎ. ಮರಣದ ಸಂದರ್ಭದಲ್ಲಿ ವರ್ಗಾವಣೆ –**

"ಸನ್ನದು ಅಥವಾ ಗುತ್ತಿಗೆ ಚಾಲ್ತಿಯಲ್ಲಿದ್ದ ಅವಧಿಯಲ್ಲಿ ಸನ್ನದುದಾರನು ಅಥವಾ ಗುತ್ತಿಗೆದಾರನು ಮರಣ ಹೊಂದಿದ್ದಲ್ಲಿ ಅಥವಾ ಸನ್ನದುದಾರನ ಅಥವಾ ಗುತ್ತಿಗೆದಾರನ ಮರಣದ ದಿನಾಂಕದಿಂದ ಆರು ತಿಂಗಳ ಅವಧಿಯೊಳಗೆ, ಅಬಕಾರಿ ಉಪ ಉಪ ಆಯುಕ್ತರು, ಮರಣ ಹೊಂದಿದ ಸನ್ನದುದಾರನ ಕಾನೂನು ಸಮ್ಮತ ವಾರಸುದಾರನ ಅರ್ಜಿಯ ಮೇರೆಗೆ ಅಬಕಾರಿ ಆಯುಕ್ತರ ಪೂರ್ವಾನುಮೋದನೆಯೊಂದಿಗೆ, ಸನ್ನದು ಅಥವಾ ಗುತ್ತಿಗೆಯನ್ನು ಸಂದರ್ಭಾನುಸಾರ ಅವರ ಪರವಾಗಿ ವರ್ಗಾಯಿಸಬಹುದು.

ಪರಂತು, ಮರಣ ಹೊಂದಿದ ಸನ್ನದುದಾರನ ಕಾನೂನು ಸಮ್ಮತ ವಾರಸುದಾರ ಅಥವಾ ಕಾನೂನು ಸಮ್ಮತ ವಾರಸುದಾರನ ಪಾಲಕರು ಮರಣದ ದಿನಾಂಕದಿಂದ ನಲವತ್ತೈದು ದಿನಗಳೊಳಗೆ ಸನ್ನದುದಾರನ ಮರಣದ ಬಗ್ಗೆ ಅಬಕಾರಿ ಉಪ ಆಯುಕ್ತರಿಗೆ ತಿಳಿಸಬೇಕು, ವಿಫಲವಾದರೆ, ಸನ್ನದು ಮಂಜೂರು ಮಾಡುವ ಪ್ರಾಧಿಕಾರವು ಸನ್ನದು ಶುಲ್ಕದ ಶೇಕಡ ಹತ್ತರಷ್ಟು ದಂಡವನ್ನು ವಿಧಿಸತಕ್ಕದ್ದು.

ಮತ್ತು ಪರಂತು, ಮರಣ ಹೊಂದಿದ ಸನ್ನದುದಾರನ ಕಾನೂನು ಸಮ್ಮತ ವಾರಸುದಾರ ಅಥವಾ ಕಾನೂನು ಸಮ್ಮತ ವಾರಸುದಾರನ ಪಾಲಕರಿಗೆ ವಿಚಾರಣೆಯ ಅವಕಾಶವನ್ನು ನೀಡದ ಹೊರತು ಅಂತಹ ದಂಡವನ್ನು ವಿಧಿಸತಕ್ಕದ್ದಲ್ಲ".

**4. <u>17–ಬಿ ನಿಯಮದ ತಿದ್ದುಪಡಿ</u>**:– ಸದರಿ ನಿಯಮಗಳ 17–ಬಿ ನಿಯಮದಲ್ಲಿ, ಉಪ–ನಿಯಮ (3) ರಲ್ಲಿ, "ಅಥವಾ ದಂಡ ವಿಧಿಸಿ" ಎಂಬ ಪದಗಳ ಬದಲಿಗೆ, "ಅಥವಾ ಸನ್ನದು ಶುಲ್ಕದ ಶೇಕಡ ಹತ್ತಕ್ಕೆ ಸಮಾನವಾದ ದಂಡ ವಿಧಿಸಿ" ಎಂಬ ಪದಗಳನ್ನು ಪ್ರತಿಸ್ಥಾಪಿಸತಕ್ಕದ್ದು.

**5. <u>23 ನೇ ನಿಯಮದ ತಿದ್ದುಪಡಿ</u>**:– ಸದರಿ ನಿಯಮಗಳ 23 ನೇ ನಿಯಮದಲ್ಲಿ,

(i) "ಜಿಲ್ಲಾಧಿಕಾರಿಗಳು" ಎಂಬ ಪದ ಎಲ್ಲೆಲ್ಲಿ ಇದೆಯೋ, ಅಲ್ಲಿ "ಅಬಕಾರಿ ಉಪ ಆಯುಕ್ತರು" ಎಂಬ ಪದಗಳನ್ನು ಪ್ರತಿಸ್ಥಾಪಿಸತಕ್ಕದ್ದು.

(ii) ಮೊದಲನೇ ಪರಂತುಕದಲ್ಲಿ, "ಸಿಎಲ್–2 ಮತ್ತು ಸಿಎಲ್–9 ಸನ್ನದುಗಳ ಸಂದರ್ಭದಲ್ಲಿ", ಎಂಬ ಪದಗಳು ಅಕ್ಷರಗಳು ಮತ್ತು ಅಂಕಿಗಳ ಬದಲಾಗಿ, "ಸಿಎಲ್–2, ಸಿಎಲ್–2ಎ, ಸಿಎಲ್–9 ಮತ್ತು ಸಿಎಲ್–9ಎ ಸನ್ನದುಗಳ ಸಂದರ್ಭದಲ್ಲಿ" ಎಂಬ ಪದಗಳು, ಅಕ್ಷರಗಳು ಮತ್ತು ಅಂಕಿಗಳನ್ನು ಪ್ರತಿಸ್ಥಾಪಿಸತಕ್ಕದ್ದು.

ii) ನಾಲ್ಕನೇ ಪರಂತುಕವನ್ನು ಕೈಬಿಡತಕ್ಕದ್ದು.

ಕರ್ನಾಟಕದ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,
ಸಹಿ/–
(ಭೀಮಪ್ಪ ಪ. ಅಜೂರ್)
ಸರ್ಕಾರದ ಅಧೀನ ಕಾರ್ಯದರ್ಶಿ,
ಆರ್ಥಿಕ ಇಲಾಖೆ (ಅಬಕಾರಿ)

**ಕರ್ನಾಟಕ ಸರ್ಕಾರ**

ಸಂಖ್ಯೆ: ಆಇ 7 ಪಿಇಎಸ್ 2025

ಕರ್ನಾಟಕ ಸರ್ಕಾರ ಸಚಿವಾಲಯ
ವಿಧಾನಸೌಧ,
ಬೆಂಗಳೂರು, ದಿನಾಂಕ: 23ನೇ ಸೆಪ್ಟೆಂಬರ್ 2025

**ಅಧಿಸೂಚನೆ–II**

ಕರ್ನಾಟಕ ಅಬಕಾರಿ ಅಧಿನಿಯಮ, 1965 (1966 ರ ಕರ್ನಾಟಕ ಅಧಿನಿಯಮ ಸಂಖ್ಯೆ 21) ರ 71 ನೇ ಪ್ರಕರಣದ ಮೂಲಕ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು ರಚಿಸಲು ಉದ್ದೇಶಿಸಿರುವ, ಕರ್ನಾಟಕ ಅಬಕಾರಿ (ಬಿಯರ್‌ನ ಚಿಲ್ಲರೆ ಮಾರಾಟದ ಹಕ್ಕಿನ ಗುತ್ತಿಗೆ) ನಿಯಮಗಳು, 1976 ಅನ್ನು ಮತ್ತಷ್ಟು ತಿದ್ದುಪಡಿ ಮಾಡಲು, ಈ ಮುಂದಿನ ನಿಯಮಗಳ ಕರಡನ್ನು, ಸದರಿ ಕಾಯ್ದೆಯ ಪ್ರಕರಣ 71ರ (1) ನೇ ಉಪ–ಪ್ರಕರಣದ ಮೂಲಕ ಅಗತ್ಯಪಡಿಸಿರುವಂತೆ ಇದರಿಂದ ಬಾಧಿತರಾಗಬಹುದಾದ ಎಲ್ಲಾ ವ್ಯಕ್ತಿಗಳ ಮಾಹಿತಿಗಾಗಿ ಈ ಮೂಲಕ ಪ್ರಕಟಿಸಿದೆ ಮತ್ತು ಅದು ಸರ್ಕಾರಿ ರಾಜ್ಯಪತ್ರದಲ್ಲಿ ಪ್ರಕಟಣೆಯಾದ ದಿನಾಂಕದಿಂದ ಹತ್ತು ದಿನಗಳ ತರುವಾಯ ಸದರಿ ಕರಡನ್ನು ಪರಿಗಣನೆಗೆ ತೆಗೆದುಕೊಳ್ಳಲಾಗುವುದೆಂದು ಈ ಮೂಲಕ ತಿಳಿವಳಿಕೆ ನೀಡಲಾಗಿದೆ.

ಮೇಲೆ ನಿರ್ದಿಷ್ಟಪಡಿಸಿದ ಅವಧಿಯ ಮುಕ್ತಾಯಕ್ಕೆ ಮುಂಚೆ, ಸದರಿ ಕರಡಿಗೆ ಸಂಬಂಧಿಸಿದಂತೆ ರಾಜ್ಯ ಸರ್ಕಾರವು ಯಾವುದೇ ವ್ಯಕ್ತಿಯಿಂದ ಸ್ವೀಕರಿಸಬಹುದಾದ ಯಾವುದೇ ಆಕ್ಷೇಪಣೆ ಅಥವಾ ಸಲಹೆಗಳನ್ನು ರಾಜ್ಯ ಸರ್ಕಾರವು ಪರಿಗಣಿಸುತ್ತದೆ. ಆಕ್ಷೇಪಣೆ ಅಥವಾ ಸಲಹೆಗಳನ್ನು ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ, ವಿಧಾನ ಸೌಧ, ಡಾ.ಬಿ.ಆರ್.ಅಂಬೇಡ್ಕರ್ ವೀಧಿ, ಬೆಂಗಳೂರು – 01 ಇವರಿಗೆ ಕಳುಹಿಸಬಹುದು.

**ಕರಡು ನಿಯಮಗಳು**

**1**. **ಶೀರ್ಷಿಕೆ ಮತ್ತು ಪ್ರಾರಂಭ** :– (1) ಈ ನಿಯಮಗಳನ್ನು ಕರ್ನಾಟಕ ಅಬಕಾರಿ (ಬಿಯರ್‌ನ ಚಿಲ್ಲರೆ ಮಾರಾಟದ ಹಕ್ಕಿನ ಗುತ್ತಿಗೆ) (ಎರಡನೇ ತಿದ್ದುಪಡಿ) ನಿಯಮಗಳು, 2025 ಎಂದು ಕರೆಯತಕ್ಕದ್ದು.

(2) ಈ ನಿಯಮಗಳು, ಕರ್ನಾಟಕ ರಾಜ್ಯ ಪತ್ರದಲ್ಲಿ ಅವುಗಳನ್ನು ಅಂತಿಮವಾಗಿ ಪ್ರಕಟಿಸಿದ ದಿನಾಂಕದಿಂದ ಜಾರಿಗೆ ಬರತಕ್ಕದ್ದು.

**2**. **5 ನೇ ನಿಯಮದ ತಿದ್ದುಪಡಿ**:– ಕರ್ನಾಟಕ ಅಬಕಾರಿ (ಬಿಯರ್‌ನ ಚಿಲ್ಲರೆ ಮಾರಾಟದ ಹಕ್ಕಿನ ಗುತ್ತಿಗೆ) ನಿಯಮಗಳು, 1976 ರ 5 ನೇ ನಿಯಮದ ಉಪ–ನಿಯಮ (1) ರಲ್ಲಿ, **"ಅಥವಾ ನಮೂನೆ ಸಿಎಲ್–9"** ಎಂಬ ಪದಗಳು, ಅಕ್ಷರಗಳು ಮತ್ತು ಅಂಕಿಯ ಬದಲಾಗಿ, **"ಅಥವಾ ನಮೂನೆ ಸಿಎಲ್–9 ಅಥವಾ ನಮೂನೆ ಸಿಎಲ್–9ಎ"** ಎಂಬ ಪದಗಳು, ಅಕ್ಷರಗಳು ಮತ್ತು ಅಂಕಿಗಳನ್ನು ಪ್ರತಿಸ್ಥಾಪಿಸತಕ್ಕದ್ದು.

ಕರ್ನಾಟಕದ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

ಸಹಿ/–
(ಭೀಮಪ್ಪ ಪ. ಅಜೂರ್)
ಸರ್ಕಾರದ ಅಧೀನ ಕಾರ್ಯದರ್ಶಿ,
ಆರ್ಥಿಕ ಇಲಾಖೆ (ಅಬಕಾರಿ)

**ಕರ್ನಾಟಕ ಸರ್ಕಾರ**

ಸಂಖ್ಯೆ: ಆಇ 7 ಪಿಇಎಸ್ 2025

ಕರ್ನಾಟಕ ಸರ್ಕಾರ ಸಚಿವಾಲಯ
ವಿಧಾನಸೌಧ,
ಬೆಂಗಳೂರು, ದಿನಾಂಕ: 23ನೇ ಸೆಪ್ಟೆಂಬರ್ 2025

**ಅಧಿಸೂಚನೆ–III**

ಕರ್ನಾಟಕ ಅಬಕಾರಿ ಅಧಿನಿಯಮ, 1965 (1966 ರ ಕರ್ನಾಟಕ ಅಧಿನಿಯಮ ಸಂಖ್ಯೆ 21) ರ 71 ನೇ ಪ್ರಕರಣದ ಮೂಲಕ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು ರಚಿಸಲು ಉದ್ದೇಶಿಸಿರುವ, ಕರ್ನಾಟಕ ಅಬಕಾರಿ (ದೇಶಿ ಮತ್ತು ವಿದೇಶಿ ಮದ್ಯಗಳ ಮಾರಾಟ) ನಿಯಮಗಳು, 1968 ಅನ್ನು ಮತ್ತಷ್ಟು ತಿದ್ದುಪಡಿ ಮಾಡಲು, ಈ ಮುಂದಿನ ನಿಯಮಗಳ ಕರಡನ್ನು, ಸದರಿ ಕಾಯ್ದೆಯ ಪ್ರಕರಣ 71ರ ಪ್ರಕರಣ (1) ನೇ ಉಪ–ಪ್ರಕರಣದ ಮೂಲಕ ಅಗತ್ಯಪಡಿಸಿರುವಂತೆ ಇದರಿಂದ ಬಾಧಿತರಾಗಬಹುದಾದ ಎಲ್ಲಾ ವ್ಯಕ್ತಿಗಳ ಮಾಹಿತಿಗಾಗಿ ಈ ಮೂಲಕ ಪ್ರಕಟಿಸಿದೆ ಮತ್ತು ಅದು ಸರ್ಕಾರಿ ರಾಜ್ಯಪತ್ರದಲ್ಲಿ ಪ್ರಕಟಣೆಯಾದ ದಿನಾಂಕದಿಂದ ಹತ್ತು ದಿನಗಳ ತರುವಾಯ ಸದರಿ ಕರಡನ್ನು ಪರಿಗಣನೆಗೆ ತೆಗೆದುಕೊಳ್ಳಲಾಗುವುದೆಂದು ಈ ಮೂಲಕ ತಿಳುವಳಿಕೆ ನೀಡಲಾಗಿದೆ.

ಮೇಲೆ ನಿರ್ದಿಷ್ಟಪಡಿಸಿದ ಅವಧಿಯ ಮುಕ್ತಾಯಕ್ಕೆ ಮುಂಚೆ, ಸದರಿ ಕರಡಿಗೆ ಸಂಬಂಧಿಸಿದಂತೆ ರಾಜ್ಯ ಸರ್ಕಾರವು ಯಾವುದೇ ವ್ಯಕ್ತಿಯಿಂದ ಸ್ವೀಕರಿಸಬಹುದಾದ ಯಾವುದೇ ಆಕ್ಷೇಪಣೆ ಅಥವಾ ಸಲಹೆಗಳನ್ನು ರಾಜ್ಯ ಸರ್ಕಾರವು ಪರಿಗಣಿಸುತ್ತದೆ. ಆಕ್ಷೇಪಣೆ ಅಥವಾ ಸಲಹೆಗಳನ್ನು ಸರ್ಕಾರದ ಪ್ರಧಾನ ಕಾರ್ಯದರ್ಶಿ, ಆರ್ಥಿಕ ಇಲಾಖೆ, ವಿಧಾನ ಸೌಧ, ಡಾ.ಬಿ.ಆರ್. ಅಂಬೇಡ್ಕರ್ ವೀಧಿ, ಬೆಂಗಳೂರು – 01 ಇವರಿಗೆ ಕಳುಹಿಸಬಹುದು.

**ಕರಡು ನಿಯಮಗಳು**

**1. ಶೀರ್ಷಿಕೆ ಮತ್ತು ಪ್ರಾರಂಭ** :– (1) ಈ ನಿಯಮಗಳನ್ನು ಕರ್ನಾಟಕ ಅಬಕಾರಿ (ಭಾರತೀಯ ಮತ್ತು ವಿದೇಶಿ ಮದ್ಯಗಳ ಮಾರಾಟ) (ಎರಡನೇ ತಿದ್ದುಪಡಿ) ನಿಯಮಗಳು, 2025 ಎಂದು ಕರೆಯತಕ್ಕದ್ದು.

(2) ಈ ನಿಯಮಗಳು, ಕರ್ನಾಟಕ ರಾಜ್ಯ ಪತ್ರದಲ್ಲಿ ಅವುಗಳನ್ನು ಅಂತಿಮವಾಗಿ ಪ್ರಕಟಿಸಿದ ದಿನಾಂಕದಿಂದ ಜಾರಿಗೆ ಬರತಕ್ಕದ್ದು.

**2. 2 ನೇ ನಿಯಮದ ತಿದ್ದುಪಡಿ**:– ಕರ್ನಾಟಕ ಅಬಕಾರಿ (ಭಾರತೀಯ ಮತ್ತು ವಿದೇಶಿ ಮದ್ಯಗಳ ಮಾರಾಟ) ನಿಯಮಗಳು, 1968 ರ (ಇದರಲ್ಲಿ ಇನ್ನು ಮುಂದೆ ಸದರಿ ನಿಯಮಗಳೆಂದು ಉಲ್ಲೇಖಿಸಲಾಗಿದೆ), ನಿಯಮ 2 ರಲ್ಲಿ,

(i)ಖಂಡ(ಎ) ನಂತರ ಈ ಮುಂದಿನವುಗಳನ್ನು ಸೇರಿಸತಕ್ಕದ್ದು, ಅಂದರೆ:–

"**(ಎ–1) "ಹರಾಜು ಪಟ್ಟಿ(Auction Pool)"** ಎಂದರೆ ಈ ಕಾಯ್ದೆ ಮತ್ತು ನಿಯಮದ ಉಪಬಂಧಗಳ ಪ್ರಕಾರ ಅವಧಿ ಮುಗಿದ ಅಥವಾ ನವೀಕರಿಸದ ಮತ್ತು "ಇ–ಹರಾಜಿಗೆ" ಲಭ್ಯವಿರುವ ಮತ್ತು ಲಭ್ಯಪಡಿಸಿರುವ ಸನ್ನದುಗಳನ್ನು ಸೂಚಿಸುತ್ತದೆ.

**(ಎ–2) "ಬಿಡ್ ಮೊತ್ತ"** ಎಂದರೆ ಹರಾಜಿನ ಆಹ್ವಾನಕ್ಕೆ ಪ್ರತಿಕ್ರಿಯೆಯಾಗಿ ಒಬ್ಬ ಬಿಡ್ಡರ್ ನೀಡಿದ ಒಟ್ಟು ಹಣಕಾಸಿನ ಕೊಡುಗೆಯಾಗಿದ್ದು, ಸನ್ನದಿಗಾಗಿ ಅವರು ಎಷ್ಟು ಪಾವತಿಸಲು ಸಿದ್ದರಿದ್ದಾರೆ ಎಂಬುದನ್ನು ಸೂಚಿಸುತ್ತದೆ.

**(ಎ–3) "ಇ–ಹರಾಜು"** ಎಂದರೆ ಆನ್‌ಲೈನ್ ಹರಾಜು ಸೇವೆಯಾಗಿದ್ದು, ಇದರಲ್ಲಿ ಭಾಗವಹಿಸುವ ಅರ್ಹರು ಈ ನಿಯಮಗಳ ಅಡಿಯಲ್ಲಿ ಒದಗಿಸಲಾದ ಯಾವುದೇ ಸನ್ನದನ್ನು ನೀಡಲು ಬಿಡ್ ಮಾಡುತ್ತಾರೆ ಮತ್ತು ಸರ್ಕಾರವು ಕಾಲಕಾಲಕ್ಕೆ ಹೊರಡಿಸಿದ ಅಧಿಸೂಚನೆಯ ಪ್ರಕಾರ ಎಲೆಕ್ಟ್ರಾನಿಕ್ ಪ್ಲಾಟ್‌ಫಾರಂ(**electronic-platform**)" ಮೂಲಕ ಇದನ್ನು ನಡೆಸಲಾಗುತ್ತದೆ.

(ii) ಖಂಡ (ಎಫ್)ರ ನಂತರ ಈ ಮುಂದಿನ ಖಂಡವನ್ನು ಸೇರಿಸತಕ್ಕದ್ದು;–

**(ಎಫ್–1)** " **ಗೆಲ್ಲುವ ಬಿಡ್(Winning Bid)**" ಎಂದರೆ ಹರಾಜಿನ ಸಮಯದಲ್ಲಿ ಅರ್ಹ ಬಿಡ್ಡರ್ ಸಲ್ಲಿಸಿದ ಅತ್ಯಧಿಕ ಹಣಕಾಸಿನ ಪ್ರಸ್ತಾಪವಾಗಿದ್ದು,ನಿರ್ದಿಷ್ಟ ಪ್ರದೇಶದಲ್ಲಿ ನಿರ್ದಿಷ್ಟ ಅವಧಿಗೆ ಸನ್ನದು ಮಂಜೂರು ಮಾಡಲು ಅಬಕಾರಿ ಇಲಾಖೆಯಿಂದ ಇದನ್ನು ಸ್ವೀಕರಿಸಲಾಗುತ್ತದೆ.

**3. <u>3 ನೇ ನಿಯಮದ ತಿದ್ದುಪಡಿ</u>**:– ಸದರಿ ನಿಯಮಗಳ 3 ನೇ ನಿಯಮದಲ್ಲಿ–

(i) ಉಪ–ನಿಯಮ (2) ರ ತರವಾಯ, ಈ ಮುಂದಿನದನ್ನು ಸೇರಿಸತಕ್ಕದ್ದು., ಅಂದರೆ:–

"(2–ಎ) **ಚಿಲ್ಲರೆ ಮಾರಾಟ ಸನ್ನದುಗಳು ಭಾರತೀಯ ಮದ್ಯ ಅಥವಾ ವಿದೇಶಿ ಮದ್ಯ ಅಥವಾ ಎರಡರನ್ನು ಸನ್ನದು ಆವರಣದೊಳಗೆ ಸೇವನೆಗೆ ನೀಡದೆ ಮಾರಾಟಕ್ಕಾಗಿ –** ನಿಯಮ 12 ರಲ್ಲಿ ಏನೇ ಇದ್ದರೂ, ಈ ಸನ್ನದುಗಳನ್ನು ಯಶಸ್ವಿ ಬಿಡ್ಡರ್ ಗಳಿಗೆ ಭಾರತೀಯ ಅಥವಾ ವಿದೇಶಿ ಮದ್ಯ ಅಥವಾ ಎರಡನ್ನೂ ಮುಚ್ಚಿದ ಬಾಟಲಿಗಳಲ್ಲಿ ಕಾಲಕಾಲಕ್ಕೆ ನಿಗದಿಪಡಿಸಿದ ಪ್ರಮಾಣದಲ್ಲಿ ಮಾರಾಟ ಮಾಡಲು ನಮೂನೆ ಸಿಎಲ್–2ಎ ನಲ್ಲಿ ನೀಡಲಾಗುವುದು, ಅಲ್ಲಿ ಬಿಡ್ಡಿಂಗ್ ಪ್ರಕ್ರಿಯೆಯನ್ನು "ಇ–ಹರಾಜು" ಮೂಲಕ ನಡೆಸಲಾಗುತ್ತದೆ. ಸ್ಥಗಿತಗೊಂಡ ಸಿಎಲ್–2 ಸನ್ನದುಗಳು, 1987 ರ ಕೋಟಾ(ಸರ್ಕಾರದ ಆದೇಶ ಸಂಖ್ಯೆ:ಹೆಚ್‌ಡಿ 452 ಇಎಫ್‌ಎಲ್ 86, ದಿನಾಂಕ:30.06.1987ರಂತೆ) ಪ್ರಕಾರ ಇನ್ನೂ ಮಂಜೂರು ಮಾಡಬೇಕಾದ ಸಿಎಲ್–2 ಸನ್ನದುಗಳು,ಸ್ಥಗಿತಗೊಂಡ ಸಿಎಲ್–11(ಸಿ) ಸನ್ನದುಗಳು,ಅಬಕಾರಿ ಆಯುಕ್ತರಿಂದ ಪೂರ್ವಾನುಮೋದನೆ ಪಡೆದ ಆದರೆ ಇನ್ನೂ ತೆರೆಯದ ಸಿಎಲ್–11(ಸಿ) ಸನ್ನದುಗಳು ಮತ್ತು ಮೈಸೂರು ಸೇಲ್ಸ್ ಇಂಟರ್‌ನ್ಯಾಷನಲ್ ಲಿ.(**M.S.I.L**) ಗೆ ಕ್ರಮವಾಗಿ ಸರ್ಕಾರದ ಆದೇಶ ಸಂಖ್ಯೆ: **FD07EFL200**8, ದಿನಾಂಕ:03.07.2009 ಮತ್ತು ಸರ್ಕಾರದ ಆದೇಶ ಸಂಖ್ಯೆ**:FD15 EFL 2015**, ದಿನಾಂಕ:23.09.2016 ರನ್ವಯ ಹಂಚಿಕೆ ಮಾಡಿರುವ ಪ್ರಕಾರ ಇನ್ನೂ ಮಂಜೂರು ಮಾಡಬೇಕಾದ ಸಿಎಲ್–11(ಸಿ) ಸನ್ನದುಗಳನ್ನು ಯಶಸ್ವಿ ಬಿಡ್ಡರ್‌ಗಳಿಗೆ ನಮೂನೆ ಸಿಎಲ್–2ಎ ನಲ್ಲಿ ನೀಡಲಾಗುತ್ತದೆ, ಅಲ್ಲಿ ಬಿಡ್ಡಿಂಗ್ ಪ್ರಕ್ರಿಯೆಯನ್ನು "ಇ–ಹರಾಜು" ಮೂಲಕ ನಡೆಸಲಾಗುತ್ತದೆ.

ಪರಂತು**,** ಸರ್ಕಾರದಿಂದ ಸಿಎಲ್–**2**ಎ ಸನ್ನದುಗಳಿಗಾಗಿ ಕಾಲ–ಕಾಲಕ್ಕೆ ನಿಗದಿಪಡಿಸಿರುವ ಸನ್ನದು ಶುಲ್ಕ ಮತ್ತು ಹೆಚ್ಚುವರಿ ಸನ್ನದು ಶುಲ್ಕಗಳನ್ನು ಪಾವತಿಸತಕ್ಕದ್ದು.

(ii) ಉಪ–ನಿಯಮ (9) ರ ತರವಾಯ, ಈ ಮುಂದಿನದನ್ನು ಸೇರಿಸತಕ್ಕದ್ದು, ಅಂದರೆ:–

**(9–ಎ) ಉಪಹಾರ ಕೊಠಡಿ (ಬಾರ್) ಸನ್ನದು–** ಈ ಸನ್ನದುಗಳನ್ನು ಭಾರತೀಯ ಅಥವಾ ವಿದೇಶಿ ಮದ್ಯ ಅಥವಾ ಎರಡರ ಮಾರಾಟಕ್ಕಾಗಿ ಊಟ ಅಥವಾ ತಿನ್ನಬಹುದಾದ ವಸ್ತುಗಳ ಪೂರೈಕೆಯೊಂದಿಗೆ ನಮೂನೆ ಸಿಎಲ್–9ಎ ನಲ್ಲಿ ನೀಡಲಾಗುವುದು. ಸ್ಥಗಿತಗೊಂಡ ಸಿಎಲ್–9 ಸನ್ನದುಗಳನ್ನು ಯಶಸ್ವಿ ಬಿಡ್ಡರ್‌ಗಳಿಗೆ ಬಿಡ್ಡಿಂಗ್ ಪ್ರಕ್ರಿಯೆಯನ್ನು "ಇ–ಹರಾಜು" ಮೂಲಕ ನಡೆಸಿ, ನಮೂನೆ ಸಿಎಲ್–9ಎ ನಲ್ಲಿ ಮಂಜೂರು ಮಾಡಲಾಗುವುದು.

ಪರಂತು, ಸಿಎಲ್–9 ಸನ್ನದಿನ ಕಾರ್ಯನಿರ್ವಹಣೆಗೆ ಸಂಬಂಧಿಸಿದಂತೆ ನಿಯಮ 3 ರ ಉಪ–ನಿಯಮ (9) ರಲ್ಲಿ ಒಳಗೊಂಡಿರುವ ಉಪಬಂಧಗಳು ಸಿಎಲ್–9ಎ ಮಂಜೂರಾತಿಗೂ ಯತಾರ್ಥವಾಗಿ ಅನ್ವಯವಾಗುತ್ತವೆ.

ಅದಲ್ಲದೇ ಪರಂತು, ಸರ್ಕಾರದಿಂದ ಸಿಎಲ್–9ಎ ಸನ್ನದುಗಳಿಗಾಗಿ ಕಾಲ–ಕಾಲಕ್ಕೆ ನಿಗದಿಪಡಿಸಿರುವ ಸನ್ನದು ಶುಲ್ಕ ಮತ್ತು ಹೆಚ್ಚುವರಿ ಸನ್ನದು ಶುಲ್ಕಗಳನ್ನು ಪಾವತಿಸತಕ್ಕದ್ದು.

**4. <u>5 ನೇ ನಿಯಮದ ತಿದ್ದುಪಡಿ</u>**:– ಸದರಿ ನಿಯಮಗಳ 5 ನೇ ನಿಯಮದಲ್ಲಿ, 3ನೇ ಪರಂತುಕದ ತರುವಾಯ, ಈ ಮುಂದಿನ ಪರಂತುಕವನ್ನು ಸೇರಿಸತಕ್ಕದ್ದು, ಅಂದರೆ:–

"ಅಲ್ಲದೆ, ಇ–ಹರಾಜು ಅಧಿಸೂಚನೆಯಲ್ಲಿ ಕಾಲ ಕಾಲಕ್ಕೆ ನಿರ್ದಿಷ್ಟಪಡಿಸಿದ ಷರತ್ತುಗಳಿಗೆ ಒಳಪಟ್ಟು, ಜಿಲ್ಲಾಧಿಕಾರಿಗಳು ಇ–ಹರಾಜಿನಲ್ಲಿ ಯಶಸ್ವಿ ಬಿಡ್‌ದಾರರಿಗೆ ಸಿಎಲ್–2ಎ ಮತ್ತು ಸಿಎಲ್–9ಎ ಸನ್ನದುಗಳನ್ನು ಸರ್ಕಾರವು ನಿಗದಿಪಡಿಸಿರುವ ಮೀಸಲಾತಿ ಮಾನದಂಡಗಳನ್ನು ಅನುಸರಿಸಿ ಅಬಕಾರಿ ಆಯುಕ್ತರ ಪೂರ್ವಾನುಮೋದನೆಯೊಂದಿಗೆ ಮಂಜೂರು ಮಾಡಬಹುದು".

**5. <u>5–ಎ ನೇ ನಿಯಮದ ತಿದ್ದುಪಡಿ</u>**:– ಸದರಿ ನಿಯಮಗಳ 5–ಎ ನೇ ನಿಯಮದಲ್ಲಿ,

(i) ಉಪ–ನಿಯಮ (3) ರಲ್ಲಿ ಈಗಿರುವ ಪರಂತುಕದ ಬದಲಾಗಿ, ಈ ಮುಂದಿನ ಪರಂತುಕಗಳನ್ನು ಪ್ರತಿಸ್ಥಾಪಿಸತಕ್ಕದ್ದು ಅಂದರೆ:–

"ಪರಂತು, ಉಪ–ನಿಯಮ 5–ಎ (3) ರಲ್ಲಿರುವ ಯಾವುದೂ ಸಿಎಲ್–2, ಸಿಎಲ್–9 ಮತ್ತು ಸಿಎಲ್–11(ಸಿ) ಸನ್ನದುಗಳಿಗೆ ಅನ್ವಯಿಸತಕ್ಕದ್ದಲ್ಲ.

ಅದಲ್ಲದೇ ಪರಂತು,

(ಎ) ಕರ್ನಾಟಕ ಅಬಕಾರಿ(ಭಾರತೀಯ ಮತ್ತು ವಿದೇಶಿ ಮದ್ಯ ಮಾರಾಟ)(ಎರಡನೇ ತಿದ್ದಪಡಿ)ನಿಯಮಗಳು,2025 ಅಂತಿಮ ಪ್ರಕಟಣೆಯ ದಿನಾಂಕದಂದು ನವೀಕರಿಸದ ಯಾವುದೇ ಸಿಎಲ್–2, ಸಿಎಲ್–9 ಮತ್ತು ಸಿಎಲ್–11(ಸಿ) ಸನ್ನದುಗಳನ್ನು ನವೀಕರಿಸದ ಮತ್ತು ಮುಟ್ಟುಗೋಲು ಹಾಕಿಕೊಳ್ಳಲಾದ ಸನ್ನದುಗಳು ಎಂದು ಭಾವಿಸತಕ್ಕದ್ದು. ಅಂತಹ ಸನ್ನದುಗಳು ನವೀಕರಣಕ್ಕೆ ಅರ್ಹವಾಗಿರತಕ್ಕದಲ್ಲ ಮತ್ತು ಅವುಗಳ ಸಂಬಂಧದಲ್ಲಿ ಸನ್ನದುದಾರರಿಗೆ ಯಾವುದೇ ಹಕ್ಕುಗಳು ಇರತಕ್ಕದಲ್ಲ ಮತ್ತು ಅಂತಹ ಸನ್ನದುಗಳು ಹರಾಜು ಮಾಡುವುದಕ್ಕಾಗಿ ಹರಾಜು ಪಟ್ಟಿಯಲ್ಲಿ ಸೇರತಕ್ಕದ್ದು;

(ಬಿ) ಅಬಕಾರಿ ವರ್ಷವು ಪ್ರಾರಂಭವಾದ ದಿನಾಂಕದಿಂದ ಆರು ತಿಂಗಳ ಅವಧಿಯೊಳಗೆ ಅಥವಾ ಸನ್ನದುದಾರನು ಮರಣ ಹೊಂದಿದ ದಿನಾಂಕದಿಂದ ಆರು ತಿಂಗಳ ಒಳಗಾಗಿ ನವೀಕರಿಸದ ಯಾವುದೇ ಸಿಎಲ್–2, ಸಿಎಲ್–9, ಸಿಎಲ್–11(ಸಿ), ಸಿಎಲ್–2A, ಸಿಎಲ್–9A ಸನ್ನದುಗಳನ್ನು ಅವಧಿ ಮುಕ್ತಾಯಗೊಂಡ ಮತ್ತು ಮುಟ್ಟುಗೋಲು ಹಾಕಿಕೊಳ್ಳಲಾದ ಸನ್ನದುಗಳು ಎಂದು ಪರಿಗಣಿಸಲಾಗುತ್ತದೆ. ಅಂತಹ ಸನ್ನದುಗಳು ನವೀಕರಣಕ್ಕೆ ಅರ್ಹವಾಗಿರತಕ್ಕದಲ್ಲ ಮತ್ತು ಅವುಗಳ ಸಂಬಂಧದಲ್ಲಿ ಸನ್ನದುದಾರರಿಗೆ ಯಾವುದೇ ಹಕ್ಕುಗಳು ಇರತಕ್ಕದಲ್ಲ, ಅಂತಹ ಸನ್ನದುಗಳು ಹರಾಜು ಮಾಡುವುದಕ್ಕಾಗಿ ಹರಾಜು ಪಟ್ಟಿಗೆ ಸೇರತಕ್ಕದ್ದು".

(ii) ಉಪ–ನಿಯಮ (4) ನ್ನು ಕೈಬಿಡತಕ್ಕದ್ದು.

**6. <u>12 ನೇ ನಿಯಮದ ತಿದ್ದುಪಡಿ</u>**:– ಸದರಿ ನಿಯಮಗಳ 12 ನೇ ನಿಯಮದಲ್ಲಿ, ಉಪ–ನಿಯಮ 3 ರಲ್ಲಿ ವಿವರಣೆಯ ನಂತರ, ಈ ಮುಂದಿನ ಪರಂತುಕವನ್ನು ಸೇರಿಸತಕ್ಕದ್ದು, ಅಂದರೆ:–

"ಪರಂತು, ನಿಯಮ 12 ರಲ್ಲಿರುವ ಯಾವುದೂ ಸಿಎಲ್–2ಎ ಸನ್ನದುಗಳಿಗೆ ಅನ್ವಯಿಸತಕ್ಕದ್ದಲ್ಲ".

**7. <u>ಹೊಸ ನಮೂನೆ ಸಿಎಲ್–2ಎ ಯ ಸೇರ್ಪಡೆ</u>**:– ಸದರಿ ನಿಯಮಗಳ ನಮೂನೆ ಸಿಎಲ್–2 ಮತ್ತು ಅದಕ್ಕೆ ಸಂಬಂಧಿಸಿದ ನಿಯಮಗಳ ನಮೂದುಗಳ ನಂತರ, ಈ ಮುಂದಿನ ನಮೂನೆಯನ್ನು ಸೇರಿಸತಕ್ಕದ್ದು, ಅಂದರೆ:–

**ನಮೂನೆ ಸಿಎಲ್–2ಎ**

**[ನಿಯಮ–3(2–ಎ) ನೋಡಿ]**

**<u>ಭಾರತೀಯ ಮದ್ಯ (ಸಾರಾಯಿ ಹೊರತುಪಡಿಸಿ) ಅಥವಾ ವಿದೇಶಿ ಮದ್ಯ ಅಥವಾ ಎರಡನ್ನೂ ಚಿಲ್ಲರೆಯಾಗಿ ಮಾರಾಟ ಮಾಡಲು ನೀಡಲಾದ ಸನ್ನದು</u>**

ನೊಂದಣಿ ಸಂಖ್ಯೆ:

ಸನ್ನದುದಾರನ ಹೆಸರು:

ಸನ್ನದುದಾರನ ವಿಳಾಸ:………………. ಮತ್ತು ಸನ್ನದಿನ ವಿಳಾಸ……………

ಸ್ಥಳ ನಗರ…….….

ಬೀದಿ………..

ಸ್ಥಳ ಸಂಖ್ಯೆ…………..

ಶ್ರೀ……………………… ಜಿಲ್ಲಾಧಿಕಾರಿಗಳು,………………….ಜಿಲ್ಲೆ (ಸನ್ನದು ಮಂಜೂರಾತಿ ಮಾಡುವ ಸಂದರ್ಭದಲ್ಲಿ)/ಅಬಕಾರಿ ಉಪ ಆಯುಕ್ತರು,………………….ಜಿಲ್ಲೆ (ಸನ್ನದು ನವೀಕರಣ ಮಾಡುವ ಸಂದರ್ಭದಲ್ಲಿ), ಆದ ನಾನು ನಿಗದಿತ ಸನ್ನದು ಶುಲ್ಕ ರೂ….…….. ಪಾವತಿಸಿರುವುದನ್ನು ಪರಿಗಣಿಸಿ, ಶ್ರೀ…………..ಶ್ರೀ….. ಇವರ ಮಗ ವಾಸ ಸ್ಥಳ…………….ಇವರನ್ನು, ಕೆಳಗೆ ವಿಧಿಸಿರುವ ಷರತ್ತುಗಳಿಗೊಳಪಟ್ಟು ಸನ್ನದಿನ ಸ್ಥಳ ಸಂ: ………………. ಆವರಣದಲ್ಲಿ ಸ್ವದೇಶಿ ಮದ್ಯ (ಸಾರಾಯಿ ಹೊರತುಪಡಿಸಿ) ಅಥವಾ ವಿದೇಶಿ ಮದ್ಯ ಅಥವಾ ಎರಡನ್ನೂ ಮಾರಾಟ ಮಾಡಲು ಅಧಿಕೃತಗೊಳಿಸಿರುತ್ತೇನೆ.

<u>ಷರತ್ತುಗಳು</u>

1. ಸನ್ನದುದಾರನು ಕರ್ನಾಟಕ ಅಬಕಾರಿ ಕಾಯಿದೆ, 1965(1966 ರ ಕರ್ನಾಟಕ ಅಧಿನಿಯಮ ಸಂಖ್ಯೆ 21) ರ ಉಪಬಂಧಗಳು, ಅಧಿಸೂಚನೆಗಳು ಮತ್ತು ಅದರಡಿಯಲ್ಲಿ ನಿಗಧಿಪಡಿಸಿದ ಯಾವುದೇ ಸಾಮಾನ್ಯ ಅಥವಾ ವಿಶೇಷ

ನಿಯಮಗಳು ಮತ್ತು ಕಾಲಕಾಲಕ್ಕೆ ಅಬಕಾರಿ ಆಯುಕ್ತರು/ಜಿಲ್ಲಾಧಿಕಾರಿಗಳು ಹೊರಡಿಸಿದ ಆದೇಶಗಳಿಗೆ ಬದ್ಧರಾಗಿರತಕ್ಕದ್ದು.

2. ಈ ಸನ್ನದಿನಡಿಯಲ್ಲಿ ಸನ್ನದುದಾರನು ಸಲ್ಲಿಸುವ ಸ್ವದೇಶಿ ಮದ್ಯ (ಸಾರಾಯಿ ಹೊರತುಪಡಿಸಿ) ಅಥವಾ ವಿದೇಶಿ ಮದ್ಯದ ನಮೂನೆಗಳಪಟ್ಟಿಯಲ್ಲಿನ ಮದ್ಯ ಮಾರಾಟಕ್ಕೆ ಹಕ್ಕುವುಳ್ಳವರಾಗಿರುತ್ತಾರೆ. ಮದ್ಯದ ನಮೂನೆಗಳ ಪಟ್ಟಿಯಲ್ಲಿ ಯಾವುದೇ ಮಾರ್ಪಾಡು ಮತ್ತು ಸೇರ್ಪಡೆಗಳು ಅಬಕಾರಿ ಉಪ ಆಯುಕ್ತರಿಂದ ಅನುಮೋದಿಸಲ್ಪಡತಕ್ಕದ್ದು. $25^0$ **under proof** ಗಿಂತ ಕಡಿಮೆ ತೀಕ್ಷ್ಣತೆ ಹೊಂದಿರುವ ಬ್ರಾಂದಿ, ವಿಸ್ಕಿ ಮತ್ತು ರಮ್ ಹಾಗೂ $35^0$ **under proof** ಗಿಂತ ಕಡಿಮೆ ತೀಕ್ಷ್ಣತೆ ಹೊಂದಿರುವ ಜಿನ್ ಮತ್ತು ಪ್ರತಿಶತ 8% ಕ್ಕಿಂತ ಹೆಚ್ಚಿಗೆ ಮದ್ಯಸಾರ ಅಂಶ ಇರುವ ಬಿಯರ್‌ನ್ನು ಮದ್ಯದ ನಮೂನೆ ಪಟ್ಟಿಯಲ್ಲಿ ಸೇರಿಸುವಂತಿಲ್ಲ.

3. ಅಬಕಾರಿ ಉಪ ನಿರೀಕ್ಷಕರಿಗಿಂತ ಕಡಿಮೆ ದರ್ಜೆ ಇರದ ಯಾವುದೇ ಅಧಿಕಾರಿಯು ಕೋರಿದಾಗ, ಸನ್ನದುದಾರನು ಮಾರಾಟಕ್ಕೆ ಆಮದು ಮಾಡಿಕೊಂಡ ಎಲ್ಲಾ ಮದ್ಯದ ಮೂಲ ರಹದಾರಿ ಪತ್ರಗಳನ್ನು ತಪಾಸಣೆಗಾಗಿ ಹಾಜರುಪಡಿಸತಕ್ಕದ್ದು ಮತ್ತು ಸನ್ನದಿನಲ್ಲಿನ ಎಲ್ಲಾ ಮದ್ಯದ ಮಾದರಿಗಳನ್ನು ರಾಸಾಯನಿಕ ಪರೀಕ್ಷೆಗಾಗಿ ತೆಗೆಯಲು ಅವಕಾಶ ನೀಡುವುದಕ್ಕೆ ಬದ್ದರಾಗಿರುತ್ತಾರೆ.

4. ಸನ್ನದುದಾರನು ದಿನನಿತ್ಯದ ಮದ್ಯದ ವಹಿವಾಟಿನ ಲೆಕ್ಕವನ್ನು ಸರಿಯಾಗಿ ನಿರ್ವಹಿಸತಕ್ಕದ್ದು ಮತ್ತು ಪ್ರತಿ ಮಾಹೆಯ ಮಾರಾಟದ ತಃಖ್ತೆಯನ್ನು ಮುಂದಿನ ಮಾಹೆಯ ಮೊದಲನೆ ವಾರದೊಳಗಿನ ಸಂಬಂಧಪಟ್ಟ ಅಬಕಾರಿ ಅಧಿಕಾರಿಗಳಿಗೆ ಸಲ್ಲಿಸತಕ್ಕದ್ದು.

5. ಕರ್ನಾಟಕ ಅಬಕಾರಿ ಕಾಯ್ದೆ, 1965ರ ಕಲಂ 29 ರ ಉಪಬಂಧಗಳ ರೀತ್ಯಾ ಸನ್ನದನ್ನು ಅಮಾನತ್ತು ಅಥವಾ ರದ್ದುಪಡಿಸಬಹುದಾಗಿರುತ್ತದೆ ಮತ್ತು ಅಬಕಾರಿ ಕಾಯಿದೆ ನಿಬಂಧನೆಗಳು ಅಥವಾ ನಿಯಮಗಳು ಮತ್ತು ಆದೇಶಗಳ ರೀತ್ಯಾ ವಿಧಿಸಿರುವ ಯಾವುದೇ ಸನ್ನದು ಷರತ್ತುಗಳ ಉಲ್ಲಂಘನೆಗೆ ಸನ್ನದುದಾರ ಅಥವಾ ಆತನ ನೌಕರ ಕಾನೂನು ಕ್ರಮಕ್ಕೆ ಹೊಣೆಗಾರರಾಗಿರುತ್ತಾರೆ.

6. ಸನ್ನದು ದಿನಾಂಕ ……………….. ರವರೆಗೆ ಚಾಲ್ತಿಯಲ್ಲಿರುತ್ತದೆ.

7. ಸಾರ್ವಜನಿಕರಿಗೆ ಮದ್ಯವನ್ನು 0.060, 0.090, 0.180, 0.300, 0.375, 0.600, 0.750 ಮತ್ತು 1 ಲೀಟರ್ ಗಳ ಸಾಮರ್ಥ್ಯದ ಹಾಗೂ ಬಿಯರ್‌ನ್ನು 0.325, ಮತ್ತು 0.650 ಲೀಟರ್ ಸಾಮರ್ಥ್ಯದ ಮುಚ್ಚಿದ ಶೀಸೆಗಳಲ್ಲಿ ಮಾರಾಟ ಮಾಡತಕ್ಕದ್ದು. ಒಬ್ಬ ಗ್ರಾಹಕನಿಗೆ ಒಂದು ಬಾರಿಗೆ ಮಾರಾಟ ಮಾಡಬಹುದಾದ ಮದ್ಯ ಹಾಗೂ ಬಿಯರ್ ನ ಪ್ರಮಾಣ ಈ ಕೆಳಗಿನ ಮಿತಿಯನ್ನು ಮೀರಬಾರದು.

(1) ವಿದೇಶಿ ಮದ್ಯ – 9.1 ಲೀಟರ್‌ಗಳು
(2) ಸ್ವದೇಶಿ ಮದ್ಯ (ಸಾರಾಯಿ ಹೊರತುಪಡಿಸಿ) – 2.3 ಲೀಟರ್‌ಗಳು
(3) ಬಿಯರ್ – 18.2 ಲೀಟರ್‌ಗಳು

ಪರಂತು, ಅಬಕಾರಿ ಆಯುಕ್ತರು ಕಾರಣಗಳೊಂದಿಗೆ ಲಿಖಿತವಾಗಿ ಆದೇಶಿಸಿದಲ್ಲಿ, ಬೇರೆ ಪ್ರಮಾಣಗಳಲ್ಲಿ ಮದ್ಯ ಮಾರಾಟ ಮಾಡಲು ಅನುಮತಿ ನೀಡಬಹುದಾಗಿರುತ್ತದೆ.

ಮತ್ತು ಪರಂತು, ಸನ್ನದುದಾರನು, ಸಿಎಲ್–5 ಸನ್ನದನ್ನು ಹೊಂದಿರುವ ವ್ಯಕ್ತಿಗೆ ಭಾರತೀಯ ಮದ್ಯ/ ವಿದೇಶಿ ಮದ್ಯ/ ಬಿಯರ್/ ವೈನ್/ ಫೋರ್ಟಿಫೈಡ್ ವೈನ್‌ನ್ನು ಮಾರಾಟ ಮಾಡಬಹುದಾಗಿರುತ್ತದೆ ಹಾಗೂ ಇದಕ್ಕೆ ಸೂಕ್ತ ರಸೀದಿಗಳನ್ನು ನೀಡತಕ್ಕದ್ದು. ಕರ್ನಾಟಕ ಅಬಕಾರಿ (ಮಾದಕ ವಸ್ತುಗಳ ಸ್ವಾಧೀನತೆ, ಸಾಗಾಣಿಕೆ, ಆಮದು ಮತ್ತು ರಫ್ತು)

ನಿಯಮಗಳು, 1967 ರ ನಿಯಮ 21 ರಲ್ಲಿ ಇಂತಹ ಮಾದಕ ಪದಾರ್ಥಗಳನ್ನು ಹೊಂದಲು, ಮಾರಾಟ ಹಾಗೂ ಸಾಗಾಣಿಕೆ ಮಾಡಲು ನಿಗಧಿಪಡಿಸಲಾದ ಗರಿಷ್ಠ ಪ್ರಮಾಣದ ಮಿತಿಯು ಸಿಎಲ್–5 ಸನ್ನದು ಹೊಂದಿರುವ ವ್ಯಕ್ತಿಗೆ ಅನ್ವಯಿಸತಕ್ಕದ್ದಲ್ಲ.

8. ಸನ್ನದು ಆವರಣದಲ್ಲಿ ಮದ್ಯ ಸೇವನೆಗೆ ಆಸ್ಪದ ನೀಡತಕ್ಕದ್ದಲ್ಲ.

8–ಎ) ಸನ್ನದುದಾರನು ಭಾರತೀಯ ಅಥವಾ ವಿದೇಶಿ ಮದ್ಯ ಅಥವಾ ಎರಡನ್ನೂ, ಕರ್ನಾಟಕ ಅಬಕಾರಿ (ಅಬಕಾರಿ ಸುಂಕ ಮತ್ತು ಶುಲ್ಕ) ನಿಯಮಗಳು, 1968 ರ ನಿಯಮ 2– ಎಎಫ್ ರಂತೆ ಘೋಷಿಸಿಕೊಂಡು ಮದ್ಯದ ಶೀಸೆಗಳ ಮೇಲಿನ ಮುದ್ರಿತ ಚೀಟಿಯ ಮೇಲೆ ಮುದ್ರಿಸಿರುವ ಗರಿಷ್ಠ ಮಾರಾಟ ಬೆಲೆಗಿಂತ ಹೆಚ್ಚಿನ ಬೆಲೆಗೆ ಮಾರಾಟ ಮಾಡತಕ್ಕದ್ದಲ್ಲ. ಅದೇ ರೀತಿ ಗ್ರಾಹಕರಿಗೆ ರಸೀದಿಗಳನ್ನು ನೀಡತಕ್ಕದ್ದು.

9. ಸನ್ನದು ಮಳಿಗೆ ತೆರೆಯುವ ಮತ್ತು ಮುಚ್ಚುವ ವೇಳೆ ………………. ರಿಂದ………..ರವರೆಗೆ.

10. ಸನ್ನದು ಪ್ರವೇಶಕ್ಕೆ ಮತ್ತು ನಿರ್ಗಮನಕ್ಕೆ ಒಂದೇ ದ್ವಾರ ಇರತಕ್ಕದ್ದು.

ದಿನಾಂಕ: ಜಿಲ್ಲಾಧಿಕಾರಿಗಳ ಕಛೇರಿ ……………ಜಿಲ್ಲೆ (ಸನ್ನದು ಮಂಜೂರಾತಿ ಮಾಡುವ ಸಂದರ್ಭದಲ್ಲಿ)/ಅಬಕಾರಿ ಉಪ ಆಯುಕ್ತರ ಕಛೇರಿ, ………………ಜಿಲ್ಲೆ (ಸನ್ನದು ನವೀಕರಣ ಮಾಡುವ ಸಂದರ್ಭದಲ್ಲಿ)

ಜಿಲ್ಲಾಧಿಕಾರಿಗಳು……………ಜಿಲ್ಲೆ (ಸನ್ನದು ಮಂಜೂರಾತಿ ಮಾಡುವ ಸಂದರ್ಭದಲ್ಲಿ)/ಅಬಕಾರಿ ಉಪ ಆಯುಕ್ತರು ………ಜಿಲ್ಲೆ (ಸನ್ನದು ನವೀಕರಣ ಮಾಡುವ ಸಂದರ್ಭದಲ್ಲಿ)

**8**. **<u>ಹೊಸ ನಮೂನೆ ಸಿಎಲ್–9ಎ ಯ ಸೇರ್ಪಡೆ</u>**– ಸದರಿ ನಿಯಮಗಳ ನಮೂನೆ ಸಿಎಲ್–9 ಮತ್ತು ಅದಕ್ಕೆ ಸಂಬಂಧಿಸಿದ ನಿಯಮಗಳ ನಮೂದುಗಳ ನಂತರ, ಈ ಮುಂದಿನ ನಮೂನೆಯನ್ನು ಸೇರಿಸತಕ್ಕದ್ದು, ಅವುಗಳೆಂದರೆ:–

**"ನಮೂನೆ ಸಿಎಲ್–9ಎ**

[ನಿಯಮ–3(9–ಎ) ನೋಡಿ]

ಭಾರತೀಯ ಮದ್ಯ (ಸಾರಾಯಿ ಹೊರತುಪಡಿಸಿ) ಅಥವಾ ವಿದೇಶಿ ಮದ್ಯ ಅಥವಾ ಎರಡನ್ನೂ ಉಪಹಾರ ಕೊಠಡಿಗಳಲ್ಲಿ (ಬಾರ್) ಊಟ ಮತ್ತು ಉಪಹಾರದೊಂದಿಗೆ ಸನ್ನದು ಆವರಣದಲ್ಲಿ ಮದ್ಯ ಸೇವನೆ ಮಾಡಲು ನೀಡಲಾದ ಸನ್ನದು

ನೊಂದಣಿ ಸಂಖ್ಯೆ:

ಸನ್ನದುದಾರನ ಹೆಸರು:

ಸನ್ನದುದಾರನ ವಿಳಾಸ:………………. ಮತ್ತು ಸನ್ನದಿನ ವಿಳಾಸ……………

ಸ್ಥಳ ನಗರ……..…

ಬೀದಿ………..

ಸ್ಥಳ ಸಂಖ್ಯೆ…………..

ಶ್ರೀ……………………… ಜಿಲ್ಲಾಧಿಕಾರಿಗಳು,…………………ಜಿಲ್ಲೆ (ಸನ್ನದು ಮಂಜೂರಾತಿ ಮಾಡುವ ಸಂದರ್ಭದಲ್ಲಿ)/ಅಬಕಾರಿ ಉಪ ಆಯುಕ್ತರು,…………………ಜಿಲ್ಲೆ (ಸನ್ನದು ನವೀಕರಣ ಮಾಡುವ ಸಂದರ್ಭದಲ್ಲಿ), ಆದ ನಾನು ನಿಗದಿತ ಸನ್ನದು ಶುಲ್ಕ ರೂ…..…….. ಪಾವತಿಸಿರುವುದನ್ನು ಪರಿಗಣಿಸಿ, ಶ್ರೀ…………..ಶ್ರೀ….. ಇವರ ಮಗ ವಾಸ ಸ್ಥಳ…………….ಇವರನ್ನು, ಕೆಳಗೆ ವಿಧಿಸಿರುವ ಷರತ್ತುಗಳಿಗೊಳಪಟ್ಟು

ಸನ್ನದಿನ ಸ್ಥಳ ಸಂ: ……………….. ಆವರಣದಲ್ಲಿ ಸ್ವದೇಶಿ ಮದ್ಯ (ಸಾರಾಯಿ ಹೊರತುಪಡಿಸಿ) ಅಥವಾ ವಿದೇಶಿ ಮದ್ಯ ಅಥವಾ ಎರಡನ್ನೂ ಮಾರಾಟ ಮಾಡಲು ಅಧಿಕೃತಗೊಳಿಸಿರುತ್ತೇನೆ.

ಷರತ್ತುಗಳು

1. ಸನ್ನದುದಾರನು ಕರ್ನಾಟಕ ಅಬಕಾರಿ ಕಾಯಿದೆ, 1965(1966 ರ ಕರ್ನಾಟಕ ಅಧಿನಿಯಮ ಸಂಖ್ಯೆ 21) ರ ಉಪಬಂಧಗಳು, ಅಧಿಸೂಚನೆಗಳು ಮತ್ತು ಅದರಡಿಯಲ್ಲಿ ನಿಗಧಿಪಡಿಸಿದ ಯಾವುದೇ ಸಾಮಾನ್ಯ ಅಥವಾ ವಿಶೇಷ ನಿಯಮಗಳು ಮತ್ತು ಕಾಲಕಾಲಕ್ಕೆ ಅಬಕಾರಿ ಆಯುಕ್ತರು/ಜಿಲ್ಲಾಧಿಕಾರಿಗಳು ಹೊರಡಿಸಿದ ಆದೇಶಗಳಿಗೆ ಬದ್ಧರಾಗಿರತಕ್ಕದ್ದು.
2. ಈ ಸನ್ನದಿನಡಿಯಲ್ಲಿ ಸನ್ನದುದಾರನು ಸಲ್ಲಿಸುವ ಸ್ವದೇಶಿ ಮದ್ಯ (ಸಾರಾಯಿ ಹೊರತುಪಡಿಸಿ) ಅಥವಾ ವಿದೇಶಿ ಮದ್ಯದ ನಮೂನೆಗಳಪಟ್ಟಿಯಲ್ಲಿನ ಮದ್ಯ ಮಾರಾಟಕ್ಕೆ ಹಕ್ಕುವುಳ್ಳವರಾಗಿರುತ್ತಾರೆ. ಮದ್ಯದ ನಮೂನೆಗಳ ಪಟ್ಟಿಯಲ್ಲಿ ಯಾವುದೇ ಮಾರ್ಪಾಡು ಮತ್ತು ಸೇರ್ಪಡೆಗಳು ಅಬಕಾರಿ ಉಪ ಆಯುಕ್ತರಿಂದ ಅನುಮೋದಿಸಲ್ಪಡತಕ್ಕದ್ದು. $25^0$ **under proof** ಗಿಂತ ಕಡಿಮೆ ತೀಕ್ಷ್ಣತೆ ಹೊಂದಿರುವ ಬ್ರಾಂದಿ, ವಿಸ್ಕಿ ಮತ್ತು ರಮ್ ಹಾಗೂ $35^0$ **under proof** ಗಿಂತ ಕಡಿಮೆ ತೀಕ್ಷ್ಣತೆ ಹೊಂದಿರುವ ಜಿನ್ ಮತ್ತು ಪ್ರತಿಶತ 8% ಕ್ಕಿಂತ ಹೆಚ್ಚಿಗೆ ಮದ್ಯಸಾರ ಅಂಶ ಇರುವ ಬಿಯರ್‌ನ್ನು ಮದ್ಯದ ನಮೂನೆ ಪಟ್ಟಿಯಲ್ಲಿ ಸೇರಿಸುವಂತಿಲ್ಲ.
3. ಅಬಕಾರಿ ಉಪ ನಿರೀಕ್ಷಕರಿಗಿಂತ ಕಡಿಮೆ ದರ್ಜೆ ಇರದ ಯಾವುದೇ ಅಧಿಕಾರಿಯು ಕೋರಿದಾಗ, ಸನ್ನದುದಾರನು ಮಾರಾಟಕ್ಕೆ ಆಮದು ಮಾಡಿಕೊಂಡ ಎಲ್ಲಾ ಮದ್ಯದ ಮೂಲ ರಹದಾರಿ ಪತ್ರಗಳನ್ನು ತಪಾಸಣೆಗಾಗಿ ಹಾಜರುಪಡಿಸತಕ್ಕದ್ದು ಮತ್ತು ಸನ್ನದಿನಲ್ಲಿನ ಎಲ್ಲಾ ಮದ್ಯದ ಮಾದರಿಗಳನ್ನು ರಾಸಾಯನಿಕ ಪರೀಕ್ಷೆಗಾಗಿ ತೆಗೆಯಲು ಅವಕಾಶ ನೀಡುವುದಕ್ಕೆ ಬದ್ಧರಾಗಿರುತ್ತಾರೆ.
4. ಸನ್ನದುದಾರನು ದಿನನಿತ್ಯದ ಮದ್ಯದ ವಹಿವಾಟಿನ ಲೆಕ್ಕವನ್ನು ಸರಿಯಾಗಿ ನಿರ್ವಹಿಸತಕ್ಕದ್ದು ಮತ್ತು ಪ್ರತಿ ಮಾಹೆಯ ಮಾರಾಟದ ತಃಖ್ತೆಯನ್ನು ಮುಂದಿನ ಮಾಹೆಯ ಮೊದಲನೆ ವಾರದೊಳಗಿನ ಸಂಬಂಧಪಟ್ಟ ಅಬಕಾರಿ ಅಧಿಕಾರಿಗಳಿಗೆ ಸಲ್ಲಿಸತಕ್ಕದ್ದು.
5. ಕರ್ನಾಟಕ ಅಬಕಾರಿ ಕಾಯ್ದೆ, 1965ರ ಕಲಂ 29 ರ ಉಪಬಂಧಗಳ ರೀತ್ಯಾ ಸನ್ನದನ್ನು ಅಮಾನತ್ತು ಅಥವಾ ರದ್ದುಪಡಿಸಬಹುದಾಗಿರುತ್ತದೆ ಮತ್ತು ಅಬಕಾರಿ ಕಾಯಿದೆ ನಿಬಂಧನೆಗಳು ಅಥವಾ ನಿಯಮಗಳು ಮತ್ತು ಆದೇಶಗಳ ರೀತ್ಯಾ ವಿಧಿಸಿರುವ ಯಾವುದೇ ಸನ್ನದು ಷರತ್ತುಗಳ ಉಲ್ಲಂಘನೆಗೆ ಸನ್ನದುದಾರ ಅಥವಾ ಆತನ ನೌಕರ ಕಾನೂನು ಕ್ರಮಕ್ಕೆ ಹೊಣೆಗಾರರಾಗಿರುತ್ತಾರೆ.
6. ಸನ್ನದು ದಿನಾಂಕ ……………….. ರವರೆಗೆ ಚಾಲ್ತಿಯಲ್ಲಿರುತ್ತದೆ.
7. ಸನ್ನದು ಆವರಣದಲ್ಲಿ ತಯಾರಿಸಿ, ಪೂರೈಸಿದ ಊಟ ಅಥವಾ ಉಪಹಾರವನ್ನು ಸೇವಿಸುವ ಗ್ರಾಹಕರಿಗೆ ಮಾತ್ರ ಮದ್ಯ ಮಾರಾಟ ಮಾಡತಕ್ಕದ್ದು.
8. ಸನ್ನದು ಮಳಿಗೆ ತೆರೆಯುವ ಮತ್ತು ಮುಚ್ಚುವ ವೇಳೆ ……………….. ರಿಂದ………..ರವರೆಗೆ.

R.N.I. No. KARBIL/2001/47147 POSTAL REGN. No. RNP/KA/BGS/2202/2017-19
Licensed to post without prepayment **WPP No. 297**



| | |
|---|---|
| ದಿನಾಂಕ: ಜಿಲ್ಲಾಧಿಕಾರಿಗಳ ಕಛೇರಿ ……………ಜಿಲ್ಲೆ (ಸನ್ನದು ಮಂಜೂರಾತಿ ಮಾಡುವ ಸಂದರ್ಭದಲ್ಲಿ)/ಅಬಕಾರಿ ಉಪ ಆಯುಕ್ತರ ಕಛೇರಿ, ………………ಜಿಲ್ಲೆ (ಸನ್ನದು ನವೀಕರಣ ಮಾಡುವ ಸಂದರ್ಭದಲ್ಲಿ)" | ಜಿಲ್ಲಾಧಿಕಾರಿಗಳು……………ಜಿಲ್ಲೆ (ಸನ್ನದು ಮಂಜೂರಾತಿ ಮಾಡುವ ಸಂದರ್ಭದಲ್ಲಿ)/ಅಬಕಾರಿ ಉಪ ಆಯುಕ್ತರು ………ಜಿಲ್ಲೆ (ಸನ್ನದು ನವೀಕರಣ ಮಾಡುವ ಸಂದರ್ಭದಲ್ಲಿ) |

ಕರ್ನಾಟಕದ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,
ಸಹಿ/–
(ಭೀಮಪ್ಪ ಪ. ಅಜೂರ್)
ಸರ್ಕಾರದ ಅಧೀನ ಕಾರ್ಯದರ್ಶಿ,
ಆರ್ಥಿಕ ಇಲಾಖೆ (ಅಬಕಾರಿ).

ಮುದ್ರಕರು ಹಾಗೂ ಪ್ರಕಾಶಕರು:– ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯಪತ್ರ, ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು
THAMMAIAH